**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 100/2023**

| | | | |
|---|---|---|---|
| **ಹೆಸರು** | : | **ವಿಜಯಲಕ್ಷ್ಮೀ** | **ಚಾ.ಸಾ.5** |
| **ಗಂಡನ ಹೆಸರು** | : | **ರಾಜಶೇಖರ** | **ಪ್ರಾ.ಸಾ.3** |
| **ವಯಸ್ಸು** | : | **45 ವರ್ಷ** | **ದಿನಾಂಕಃ 28-03-2024** |
| **ಉದ್ಯೋಗ** | : | **ಟೇಲರ** | |
| **ವಾಸಸ್ಥಳ** | : | **ಸುಲೇಪೇಟ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಪ್ರಾಸಾ-1 ನನ್ನ ತಮ್ಮ. ಪ್ರಾಸಾ-2 ನನ್ನ ತಾಯಿ. ಆರೋಪಿ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-</u>**

ದಿನಾಂಕ 22-05-2019 ರಂದು ರಾತ್ರ 7.15 ಗಂಟೆ ಸುಮಾರಿಗೆ ನಾನು ಮತ್ತು ನನ್ನ ತಾಯಿ ಮನೆಯಲ್ಲಿ ಇದ್ದಾಗ ಬಡಕಲ್ ಎರಿಯಾದಲ್ಲಿ ಜಗಳವಾಡುವ ಶಬ್ದ ಕೇಳಿ ಹೋಗಿ ನೋಡಿದಾಗ ರಾಜಪ್ಪ ನಿಳಗಿರವರ ಮನೆಯ ಮುಂದೆ ಆರೋಪಿತರು ಸೇರಿ ನನ್ನ ತಮ್ಮನಿಗೆ ಒತ್ತು ಹೀಡಿದು ತಡೆದು ನಿಲ್ಲಿಸಿ ಕೈಯಿಂದ ಹೊಡೆಯುತ್ತಿದ್ದರು ಎಂದರೆ ಸರಿಯಲ್ಲ. ಆಗ ಇಸ್ಮಾಯಿಲ್ ಈತನ ಕೈಯಲ್ಲಿದ್ದ ಬ್ಲೇಡನಿಂದ ನನ್ನ ತಮ್ಮನ ಎಡಗೈ ಮೊಳಕೈ ಕೇಳಗೆ ಹೋಡೆದನು ಎಂದರೆ ಸರಿಯಲ್ಲ. ಆದ್ದರಿಂದ ನನ್ನ ತಮ್ಮನ ಮೈಯಲ್ಲ ರಕ್ತಗಾಯವಾಗಿತ್ತು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿಯಾದ ಪ್ರಾಸಾ-2 ರವರು ಸೇರಿ ಜಗಳ ಬಿಡಿಸಿದ್ದೇವೆ ಎಂದರೆ ಸರಿಯಲ್ಲ. ಹಿಂದಿನ ಜಗಳದ ವೈಮನಸ್ಸಿನಿಂದ ಆರೋಪಿ ಕೃತ್ಯ ಮಾಡಿದ್ದಾನೆ ಎಂದರೆ ಸರಿಯಲ್ಲ. ಈ ರೀತಿ ನಾನು ದಿನಾಂಕ 23-05-2019 ರಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**